# <u>ಪತ್ರಿಕಾ ಪ್ರಕಟಣೆ</u>

## ವಿಶ್ವವಿದ್ಯಾಲಯ ಪೊಲೀಸ ಠಾಣೆ ಗುನ್ನೆ ನಂ 114/2022 ಕಲ.392 ಐ.ಪಿ.ಸಿ ಪ್ರಕರಣದಲ್ಲಿ ಅಂತರ ರಾಜ್ಯ ಮತ್ತು ಸ್ಥಳೀಯ ದರೋಡೆಕೋರರ ಬಂಧನ.

* * * * *

ದಿನಾಂಕ 30.05.2022 ರಂದು ಕಲಬುರಗಿ ನಗರದ ವಿಶ್ವ ವಿದ್ಯಾಲಯ ಪೊಲೀಸ್ ಠಾಣೆ ವ್ಯಾಪ್ತಿಯ ನಾಗನಹಳ್ಳಿ ಓವರ್ ಬ್ರಿಡ್ಜ್ ಹತ್ತಿರ ರಸ್ತೆಯ ಮೇಲೆ ಟಾಟಾ ಎಲ್.ಪಿ.ಟಿ 1109 ಲಾರಿ ನಂ. ಕೆಎ 50 1232 ಮತ್ತು ಲಾರಿಯಲ್ಲಿದ್ದ ಸಾಮಾನುಗಳಾದ 1) ಆದಮ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ನೇದ್ದರ 80 ಅಸ್ಕೀನ್ ಪೌಡರ್ ಬಾಕ್ಸ್ 2) 10 ಬಟ್ಟೆ ಬಂಡಲ್ 3) 20 ಪೇಪರ್ ಕಪ್ ಕಾಟನ್ ಬಾಕ್ಸ್ 4) 20 ಕಿರಾಣಾ ಸಮಾನುಗಳ ಬಾಕ್ಸ್ 5) 2 ಬಾಂಡೆ ಡಾಗ್ 6) 25 ಕಟ್ಟಿಗೆ ಕೊಟ್ಟಿಲು 7) 10 ಬಂಡಲ್ ಪ್ಲಾಸ್ಟಿಕ್ ಬ್ಯಾಗ್ 8) 30 ಚಪ್ಪಲಿಗಳ ಬಾಕ್ಸ್ 9) 20 ಬ್ಯಾಗ್ ಕಾಳುಗಳ ಕಿರಾಣಾ ಚೀಲಗಳು 10) 10 ದಾಲ್ ಬ್ಯಾಗ್ 11) 10 ಕುಕ್ಕರ್, ಮಿಕ್ಸರ್ ಬಾಕ್ಸಗಳು 12) 4 ಗಾದಿ ಬಂಡಲ್ ನೇದ್ದವುಗಳನ್ನು ಚಾಲಕನಿಗೆ ಹೆದರಿಸಿ ಸುಲಿಗೆ ಮಾಡಿದ ಬಗ್ಗೆ ಪ್ರಕರಣ ಸಂಖ್ಯೆ 114/2022 ಕಲಂ 392 ಐಪಿಸಿ ಪ್ರಕಾರ ಪ್ರಕರಣ ದಾಖಲಾಗಿದ್ದರಿಂದ ಮಾನ್ಯ ವೈ.ಎಸ್.ರವಿಕುಮಾರ್ (ಐ.ಪಿ.ಎಸ್), ಮಾನ್ಯ ಅಡ್ಡೂರು ಶ್ರೀನಿವಾಸುಲು, ಉಪ-ಪೊಲೀಸ ಆಯುಕ್ತರು (ಕಾ&ಸು) ಮಾನ್ಯ ಶ್ರೀಕಾಂತ ಕಟ್ಟಿಮನಿ ಉಪ-ಪೊಲೀಸ ಆಯುಕ್ತರು (ಅ&ಸಂ) ಮಾನ್ಯ ಗೀತಾ ಬೇನಾಳ ಎ.ಸಿ.ಪಿ, ಸಬ್ ಅರ್ಬನ್ ಉಪ-ವಿಭಾಗ ಕಲಬುರಗಿ ನಗರ ರವರ ಮಾರ್ಗದರ್ಶನದಲ್ಲಿ ಶ್ರೀ ಅರುಣ ಮುರಗುಂಡಿ ಪೊಲೀಸ ಇನ್ಸಪೆಕ್ಟರ್ ವಿಶ್ವ ವಿದ್ಯಾಲಯ ಪೊಲೀಸ ಠಾಣೆ ಕಲಬುರಗಿ ನಗರ ರವರ ನೇತೃತ್ವದಲ್ಲಿ ಹಾಗೂ ಸಿಬ್ಬಂದಿಯವರಾದ ಹುಸೇನ್ ಬಾಷಾ ಎ.ಎಸ್.ಐ, ರಾಜು ಟಾಕಳೆ, ಶಶಿಕಾಂತ, ಈರಣ್ಣಾ, ಪ್ರಭಾಕರ, ವಿಶ್ವನಾಥ, ಮಂಜುನಾಥ, ಪ್ರಕಾಶ, ತೌಸೀಫ್ ರವರಿಂದ ಕೂಡಿದ ತಂಡ 1) ಮೊಹಮ್ಮದ ಅಲೀಮ್ ಪಟೇಲ ತಂದೆ ಪಾಶಾ ಪಟೇಲ ಸಾ: ಖಾಜಾ ಕಾಲೋನಿ ಟೀನಿ ಪೀಲ್ಸ್ ಸ್ಕೂಲ್ ಹತ್ತಿರ ಕಲಬುರಗಿ, 2) ಮೊಹಮ್ಮದ ಮುಜಾಫರ್ ತಂದೆ ಮೊಹಮ್ಮದ ಮಹಿಬೂಬ ಸಾ: ಕಿಂಗ್ ಕಾಲೋನಿ ಶಾಸ್ತ್ರಿ ಪುರಂ ರೋಡ ನಂ. 1 ಅಲೀಮ್ ಬೈ ಕೀ ಮಜೀದ್ ಹತ್ತಿರ ಹೈದ್ರಾಬಾದ, 3) ಸೈಯದ ಗಯಾಜ್ ಆಸ್ಕೀ ತಂದೆ ಸೈಯದ ಇಸ್ಮಾಯಿಲ್ ಆಸ್ಕೀ, ಸಾ: ವಟ್ಟಪಲ್ಲಿ ರೋಶನ್ ಕಾಲೋನಿ ಸಹರಾ ಮಜೀದ್ ಹತ್ತಿರ ಹೈದ್ರಾಬಾದ, 4) ಮುಬಾರಕ್ ಬಿನ್ ಅವದ್ ತಂದೆ ಅವದ್ ಸಾ: ಟಗಲಗುಂಟ ಗುಲಜರ್ ನಗರ ಮದೀನಾ ಮಜೀದ್ ಹತ್ತಿರ ಹೈದ್ರಾಬಾದ, 5) ಮಹ್ಮದ ಇಲಿಯಾಸ್ ತಂದೆ ಶೇಖ್ ಇಮಾಮ್ ವಯ: 22 ವರ್ಷ, ಉ: ಡಿ ಫಾರ್ಮಸಿ, ಜಾತಿ: ಮುಸ್ಲಿಂ, ಸಾ: ಸಾ: ಅಥೀಕ್ ಫಂಕ್ಷನ್ ಹಾಲ್ ಹತ್ತಿರ ಅರಾಫತ್ ಕಾಲೋನಿ ಕಲಬುರಗಿ ಅಂತಾ ತಿಳಿಸಿ, ಅವರು ಕಲಬುರಗಿ ನಗರದ ನಾಗನಹಳ್ಳಿ ಓವರ್ ಬ್ರಿಡ್ಜ ಹತ್ತಿರ ಲಾರಿ ಮತ್ತು ಅದರಲ್ಲಿದ್ದ ಸಾಮಾನುಗಳನ್ನು ಕಸಿದುಕೊಂಡಿದ್ದು, ಮತ್ತು ತನಿಖೆ ಕಾಲಕ್ಕೆ ಸಬ್ ಅರ್ಬನ್ ಪೊಲೀಸ ಠಾಣೆಯ ವ್ಯಾಪ್ತಿಯಲ್ಲಿ ಅಶೋಕ ಲೈಲಂಡ್ ಕಸಿದುಕೊಂಡಿದ್ದ ಬಗ್ಗೆ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದು, ಅವರಿಂದ ಸುಲಿಗೆ ಮಾಡಿದ ಟಾಟಾ ಲಾರಿ, ಅದರಲ್ಲಿ ಸಾಮಾನುಗಳು ಅ.ಕಿ-22,13,344/-ರೂ, ಮತ್ತು ಅಶೋಕ ಲೈಲಂಡ ವಾಹನ ಅ.ಕಿ-2,00,000/-ರೂ ನೇದ್ದವು ಹಾಗೂ ಕೃತ್ಯಕ್ಕೆ ಬಳಸಿದ ಎರಡು ಮೊಟಾರ ಸೈಕಲಗಳು ಆರೋಪಿತರು ಹಾಜರ ಪಡಿಸಿದ್ದು ಅವುಗಳನ್ನು ಪೊಲೀಸ್ ಅಧಿಕಾರಿಗಳು ತನಿಖೆ ಕಾಲಕ್ಕೆ ಒಟ್ಟು 24,13,344 ಕಿಮ್ಮತ್ತಿನ ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದು ಇರುತ್ತದೆ.

ಪ್ರಕರಣವನ್ನು ಬೇಧಿಸುವಲ್ಲಿ ಮತ್ತು ಸದರಿ ಆರೋಪಿತರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಡುವಲ್ಲಿ ಯಶ್ವಸಿಯಾದ ಕಲಬುರಗಿ ನಗರದ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ಅಧಿಕಾರಿ ಮತ್ತು ಸಿಬ್ಬಂದಿಯವರ ಕಾರ್ಯಕ್ಕೆ ಮಾನ್ಯ ಪೊಲೀಸ್ ಆಯುಕ್ತರು ಕಲಬುರಗಿ ನಗರ ರವರು ಮತ್ತು ಮಾನ್ಯ ಡಿ.ಸಿ.ಪಿ. (ಕಾ.ಸು.), ಮಾನ್ಯ ಡಿ.ಸಿ.ಪಿ. (ಅ.ಸಂ.), ಕಲಬುರಗಿ ನಗರ ರವರು ಮೆಚ್ಚುಗೆ ವ್ಯಕ್ತಪಡಿಸಿದ್ದು ಇರುತ್ತದೆ.